## ಮಧ್ಯಂತರ ಅರ್ಜಿ  ನಂ. 5 ರ ಮೇಲೆ ಆದೇಶ

1. ಅರ್ಜಿದಾರ/ ಜೆ .ಡಿ. ಆರ್. ನಂ. 2 ರವರು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ -21 ನಿಯಮ- 58 ಸಹವಾಚಕ ಕಲಂ. 151 ಹಾಗೂ ಕಲಂ. 47 ರಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಅಂಕೋಲಾ ತಾಲೂಕಿನ ಕೊಡ್ಲಗದ್ದೆ ಗ್ರಾಮದ ಜಮೀನು ಸ ನಂ. 117, ಬ್ಲಾಕ ನಂ. 28 ವಿಸ್ತೀರ್ಣ 0-5-8 ಆಸ್ತಿಯ ಪೈಕಿ 1/3  ಆಸ್ತಿಯ ಜಮೀನಿಗೆ ಮಾಲೀಕನೆಂದು ಠರಾಯಿಸಲು ವಿನಂತಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ದಾವಾಸ್ತಿಯ ಕಬ್ಜೆ ಕೊಡಿಸುವಂತೆ ಡಿಕ್ರಿದಾರರು ಸಲ್ಲಿಸಿದ ಮೂಲ ದಾವೆ ನಂ. 20/2002 ರಲ್ಲಿ ದಿಃ 20-01-2004 ರಂದು ಡಿಕ್ರಿಯಾಗಿ ತೀರ್ಪುಋಣಿದಾರರು ದಾವಾಸ್ತಿಯ ಕಬ್ಜೆ ನೀಡುವಂತೆ ನ್ಯಾಯಾಲಯ ಆದೇಶಿಸಿರುತ್ತದೆ. ಡಿಕ್ರಿದಾರ ನಂ. 1 ರವರ ಆರೋಗ್ಯ ಕ್ಷೀಣಿಸುತ್ತಾ ಬಂದಿದ್ದು, ಅವಳಿಗೆ ಗಂಡ ಹಾಗೂ ಮಕ್ಕಳು ಇಲ್ಲದೇ ಇರುವುದರಿಂದ ಅವಳ ಆಸ್ತಿಯನ್ನು ಕಬಳಿಸಬೇಕೆಂದು ಉಳಿದ ಡಿಕ್ರಿದಾರರು ಯೋಜನೆ ರೂಪಿಸಿ ಅವಳನ್ನು ದಾವಾಸ್ತಿಯಿಂದ ಹೊರಗೆ ಹಾಕಿರುತ್ತಾರೆ. ಸದರಿ ಡಿಕ್ರಿದಾರ ನಂ. 1 ರವರು ತನಗೆ ಸಂಬಂಧಿಸಿದ ದಾವಾಸ್ತಿಯ ಪೈಕಿ 1/3 ಕ್ಷೇತ್ರವನ್ನು ಮಾರಾಟ ಮಾಡುವ ಯೋಜನೆ ಇರುವಾಗ ದಿಃ 18-3-2021 ರಂದು 50,000/- ರೂ. ಗಳಿಗೆ 1/3 ಹಕ್ಕಿನ ಕುರಿತು ಕರಾರು ಪತ್ರವನ್ನು ಮಾಡಿಕೊಂಡಿದ್ದು, ದಾವಾಸ್ತಿ

ವಾಟ್ನಿಯಾಗದೇ ಇರುವುದರಿಂದ ಮಾರಾಟ ಮಾಡಲು ಒಪ್ಪಿ ಕೇವಲ ಕರಾರು ಪತ್ರವನ್ನು ಬರೆದುಕೊಟ್ಟಿದ್ದಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು ಸದರಿ ತೀರ್ಪುರುಣೆದಾರರು ದಾವಾಸ್ತಿಯಲ್ಲಿರುವ ಸುಂಕಸಾಳ ಪಂಚಾಯತ ವ್ಯಾಪ್ತಿಯಲ್ಲಿಯ  ಗ್ರಾಮದ ಮನೆ ನಂ.43 ರಲ್ಲಿ ಕುಟುಂಬ ಸಹಿತ ವಾಸ್ತವ್ಯ ಮಾಡಿಕೊಂಡು ಬಂದಿದ್ದಿರುವುದರಿಂದ ಹಾಗೂ ಡಿಕ್ರಿದಾರ ನಂ. 1 ರವರು ದಿಃ 27-10-2021 ರಂದು ದಾವಾ ಆಸ್ತಿಯಲ್ಲಿರುವ ತನ್ನ ಪಾಲಿನ ಕ್ಷೇತ್ರದ ಕುರಿತಾಗಿ ಜಿಪಿಎ ಯನ್ನು ಬರೆದುಕೊಟ್ಟಿರುವುದರಿಂದ ನ್ಯಾಯಾಲಯವು ಈಗಾಗಲೇ ತೀರ್ಪುರುಣೆದಾರರ ವಿರುದ್ಧ ಹೊರಡಿಸಿದ ಕಬ್ಜೆ ವಾರಂಟ್ ಆದೇಶ ಊರ್ಜಿತಗೊಳ್ಳುವುದಿಲ್ಲ. ಕಾರಣ ಸದರಿ ಆದೇಶವನ್ನು ತೆಗೆದುಹಾಕಿ ತೀರ್ಪುರುಣೆದಾರರರನ್ನು ಸಹ ಮಾಲೀಕರು ಎಂದು ಠರಾಯಿಸಲು ವಿನಂತಿಸಿರುತ್ತಾರೆ.

ಸದರಿ ಅರ್ಜಿಗೆ ಡಿಕ್ರಿದಾರರ ಪರ ತಕರಾರು ಸಲ್ಲಿಸಿ ಪ್ರಸ್ತುತ ದಾವಾ ಸ್ವತ್ತನ್ನು ಜಪ್ತಿ ಮಾಡಿ ವಿಲೇವಾರಿ ಮಾಡುವ ಕ್ರಮ ಅನುಸರಿಸದೇ ಇರುವುದರಿಂದ ತೀರ್ಪುರುಣೆದಾರ ತನ್ನ ಹಕ್ಕನ್ನು ಸ್ಥಾಪಿಸುವ ಸಲುವಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ ಮತ್ತು ಆ ಕುರಿತು ಪ್ರಸ್ತುತ ಪ್ರಕರಣದಲ್ಲಿ ನ್ಯಾಯನಿರ್ಣಯ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಪ್ರಸ್ತುತ ಡಿಕ್ರಿದಾರರು ಆಸ್ತಿಯ ಕಬ್ಜಾ

ವಹಿಸಿಕೊಡುವಂತೆ ಈಗಾಗಲೇ ಆದೇಶ ಪಡೆದಿರುವುದರಿಂದ ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –21 ನಿಯಮ –58 ರಡಿಯಲ್ಲಿ ಮಾಡಿದ ಮಾಗಣಿ ಊರ್ಜಿತಗೊಳ್ಳುವುದಿಲ್ಲ. ತೀರ್ಪುರುಣಿದಾರ ತಿಳಿಸಿದಂತೆ ದಾವಾಸ್ತಿಯ ಮೇಲೆ ಖರೀದಿ ಕರಾರಿನ ಅಡಿಯಲ್ಲಿ ಯಾವುದೇ ಹಕ್ಕನ್ನು ಪ್ರತಿಷ್ಠಾಪಿಸಲು ಅವಕಾಶವಿರುವುದಿಲ್ಲ. ಸದರಿ ಖರೀದಿದಾರನ ಅಡಿ ತೀರ್ಪುರುಣಿದಾರರು ಪ್ರಸ್ತುತ ಪ್ರಕರಣದಲ್ಲಿ ಹಕ್ಕು ಸಾಧಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿ, ಅರ್ಜಿ ವಜಾಮಾಡಲು ತಿಳಿಸಿರುತ್ತಾರೆ.

**4.** ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ..........

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ಜೆಡಿಆರ್ ರವರು ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

**5.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ನಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

## ಕಾರಣಗಳು

6. **ಅಂಶ ನಂ.1**:- ಅಂಕೋಲಾ ತಾಲೂಕಿನ ಕೊಡ್ಲಗದ್ದೆ ಗ್ರಾಮದ ಸ ನಂ. 117 ಈಗಿನ ಬ್ಲಾಕ್ ನಂ. 22 ವಿಸ್ತೀರ್ಣ 0-5-8 ಹಾಗೂ ಅದರಲ್ಲಿರುವ ಸುಂಕಸಾಳ ಗ್ರಾಮ ಪಂಚಾಯತಿ ಮನೆ ನಂ. 43 ನ್ನು ಮೂಲ ದಾವೆ ನಂ. 20/2002 ರಲ್ಲಿ ಆದ ಡಿಕ್ರಿ ಪ್ರಕಾರ ಕಬ್ಜೆ ನೀಡುವಂತೆ ಡಿಕ್ರಿದಾರರು ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಕಬ್ಜಾ ಹಸ್ತಾಂತರಣಕ್ಕಾಗಿ ವಾರಂಟ್ ಹೊರಡಿಸುವುದಕ್ಕಾಗಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ.

ದಿಃ 27-10-2021 ರಂದು ಡಿ. ಹೆಚ್. ಆರ್. ನಂ. 1 ರವರು ಬರೆದುಕೊಟ್ಟಿರುತ್ತಾರೆಂದು ಹೇಳುವ ಖರೀದಿ ಕರಾರು ಪತ್ರದ ಹಾಗೂ ಮೊಕ್ತ್ಯಾರ ಪತ್ರದ ಆಧಾರದ ಮೇಲಿಂದ ದಾವಾಸ್ತಿ 1/3 ಹಕ್ಕಿಗೆ ಡಿ. ಹೆಚ್. ಆರ್. ನಂ. 1(ಬಿ) ರವರು ಹಕ್ಕುದಾರರಿದ್ದು, ಕಾರಣ ಆ ಕುರಿತು ಮಾಲೀಕತ್ವವನ್ನು ಘೋಷಿಸಬೇಕು ಹಾಗೂ ಜಪ್ತಿ ವಾರಂಟ್ ಆದೇಶವನ್ನು ತೆಗೆದುಹಾಕಬೇಕೆಂದು ಪ್ರಸ್ತುತ ಅರ್ಜಿಯಲ್ಲಿ ಮಾಗಣಿ ಮಾಡಿರುತ್ತಾರೆ. ಹಣ ಸಂದಾಯದ ದಾವೆಯಲ್ಲಿ ತೀರ್ಪುರುಣಿದಾರರು ಹಣ ಸಂದಾಯ ಮಾಡಲು ವಿಫಲರಾದರೆ ಅಂತಹ ಸಮಯದಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ -21 ನಿಯಮ- 54 ರಡಿ ಜಪ್ತಿಪಡಿಸಿಕೊಂಡ ಸ್ಥಿರಸ್ವತ್ತನ್ನು ತೀರ್ಪುರುಣಿದಾರ ವರ್ಗಾಯಿಸುವುದನ್ನು ತಡೆಯಲು ಮತ್ತು ಇತರ ಪರಿಹಾರವನ್ನು ಪಡೆಯಲು ಅವಕಾಶವಿದ್ದು, ಅಂತಹ ಆದೇಶದಿಂದ ಭಾದಿತರಾದ

ಹಿತಾಸಕ್ತಿಯುಳ್ಳ ಪಕ್ಷಗಾರರು ಪ್ರಸ್ತುತ ಸ್ವರೂಪದ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಆದರೆ ಪ್ರಸ್ತುತ ಪ್ರಕರಣವು ಹಣಕಾಸಿನ ವಸೂಲಾತಿ ಕುರಿತಾಗಿರದೇ ಕಬ್ಜಾ ಸ್ವಾಧೀನವನ್ನು ಮಾಲೀಕರಾದ ಡಿ.ಹೆಚ್.ಆರ್. ರವರ ಹೆಸರಿನಲ್ಲಿ ಬಿಟ್ಟುಕೊಡುವ ಕುರಿತಾಗಿರುವುದರಿಂದ ಅರ್ಜಿಯಲ್ಲಿ ಕೇಳಿದ ಮಾಗಣಿಯನ್ನು ದರಖಾಸ್ತ ಪ್ರಕರಣದಲ್ಲಿ ವಿಚಾರಣೆ ಮಾಡಲು ಅವಕಾಶವಿರುವುದಿಲ್ಲ. ಕಾರಣ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ತೀರ್ಪುದಾರುಣಿದಾರರು ಅರ್ಹರಿರುವುದಿಲ್ಲವೆಂದು ಪರಿಗಣಿಸಿ ಅಂಶ ನಂ. 1 ಕ್ಕೆ "**ನಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

10. **ಅಂಶ ನಂ. 2**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ಮಧ್ಯಂತರ ಅರ್ಜಿ ನಂ.5 ನ್ನು ರೂ. 200/- ಖರ್ಚಿನ ಸಹಿತ ವಜಾಗೊಳಿಸಲಾಗಿದೆ.

ಮುಂದಿನ ಕ್ರಮಕ್ಕಾಗಿ ಪ್ರಕರಣವನ್ನು ದಿಃ 09-02-2024 ರಂದು ಕರೆಯಿರಿ.

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**